


# ಸೇವಾ ವಾಣಿ

ಸಂಪುಟ– 01

ಸಂಚಿ – 01
ಜುಲೈ 2022



ಪೂಜ್ಯ ರಾಬರ್ಟ್ ಮಿರಾಂದಾ
ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ಸಂಪಾದಕರು

ಆರ್ಬಿಟ್ ಸಂಸ್ಥೆಯು ಬೀದರ್‌ಜಿಲ್ಲೆಯಲ್ಲಿ ಕಳೆದ 29 ವರ್ಷಗಳಿಂದ ಜನ ಪರ ಸಮಾಜ ಸೇವೆಯನ್ನು ಮಾಡುತ್ತಾ, ಬಡವರ, ನಿರ್ಗತಿಕರ, ಅಸಹಾಯಕರ, ಮಹಿಳಾ ಸಬಲೀಕರಣ ಸೇವೆಯನ್ನುಜಾತಿ–ಮತಭೇದವಿಲ್ಲದೆ ಮಾಡಿಕೊಂಡು ಬಂದಿದೆ. ಸಾಂಕ್ರಮಿಕರೋಗದ ಸಂದರ್ಭದಲ್ಲಿ ಸಂಸ್ಥೆಯಕಾರ್ಯಕರ್ತರುಜನ ಸೇವೆಯಲ್ಲಿತೊಡಗಿ ಮಾನವೀಯತೆಯನ್ನು ಮೆರೆದಿದ್ದಾರೆ. ಜುಲೈ ತಿಂಗಳಿನಿಂದ ಸಂಸ್ಥೆಯು ಸೇವಾ ವಾಣಿ ಪತ್ರಿಕೆ ಮೂಲಕ ತಮ್ಮ ತಿಂಗಳ ಕೆಲಸದ ವರದಿಯನ್ನು ನಿಮ್ಮ ಮುಂದೆತರಲು ಪ್ರಯತ್ನಿಸುತ್ತೇವೆ. ನಮ್ಮ ಸಂಸ್ಥೆಯ ಪ್ರತಿಯೊಂದು ಕೆಲಸ ಕಾರ್ಯಗಳು ನಿಮಗೂ ಪ್ರೇರಣೆಯನ್ನು ನೀಡಲಿ ಹಾಗೂ ಸ್ವಯಂ ಸೇವಕರಾಗಿ ಸಂಸ್ಥೆಯ ಸೇವೆ ಮಾಡಲು ನಿಮಗೆ ಸ್ಪೂರ್ತಿಯಾಗಲಿ.

ನಮ್ಮ ಸಂಸ್ಥೆಯು ಪ್ರಸ್ತುತವಾಗಿ ಮಹಿಳಾ ಸಬಲೀಕರಣ, ಚೈಲ್ಡ್ ಲೈನ್, ಶೀಘ್ರ ಪತ್ತೆ ಹಚ್ಚುವಿಕೆ, ಮಾನಸಿಕ ಅಸ್ವಸ್ಥರಕಾರ್ಯಕ್ರಮ, ಕೌಶಲ್ಯಅಭಿವೃದ್ಧಿಕಾರ್ಯಕ್ರಮ, ಸ್ವ–ಸಹಾಯ ಸಂಘಗಳಿಗೆ ಸಮೃದ್ಧಿ ಲೋನ್, ಮಕ್ಕಳಿಗೆ ಸಾಯಂಕಾಲದಟ್ಯೂಷನ್, ಹೆಚ್.ಐ.ವಿ ರೋಗಿಗಳಿಗೆ ಸಹಾಯಹಸ್ತ, ಕ್ಯಾನ್ಸರ್ ಬಗ್ಗೆ ಅರಿವು ಮೂಡಿಸುವುದು ಹಾಗೂ ಇತರ ಕೆಲಸ, ಕಾರ್ಯಕ್ರಮ ಹಾಗೂ ಆಚರಣೆಗಳ ಮೂಲಕ ಸಮಾಜದಅಭಿವೃದ್ಧಿಯಲ್ಲಿಆರ್ಬಿಟ್ ಸಂಸ್ಥೆ ಬೀದರಜಿಲ್ಲೆಯಲ್ಲಿತನ್ನದೇಒಂದುಛಾಪು ಮೂಡಿಸಿದೆ.

Organization of Bidar Integral Transformation, ORBIT, NH 65, Near Railway Sation, Humnabad 585330
Web: www.orbitbidar.org E.mail: orbitbidar93@gmail.com Facebook:orbitbidar

ನಾಲ್ಕು ವರ್ಷಗಳ ಕಾಲ ಆರ್ಬಿಟ್ ಸಂಸ್ಥೆಯಲ್ಲಿ ಕಾರ್ಯಕ್ರಮಗಳ ಸಂಯೋಜಕಿಯಾಗಿ ಸೇವೆ ಸಲ್ಲಿಸಿ ಸಂಸ್ಥೆಯ ಬೆಳವಣಿಗೆಯಲ್ಲಿ ಸಂಪೂರ್ಣ ಸಹಕಾರ ನೀಡಿ ಬೇರೆಂದುಕಡೆ ವರ್ಗಾವಣೆಯಾದ ಸಿಸ್ಟರ್. ಮಿನಿ ಮ್ಯಾಥ್ಯೂಇವರಿಗೆ ಸಂಸ್ಥೆಯು ಸದಾಚಿರಋಣಿಯಾಗಿರುತದೆ, ಸೇವಾ ವಾಣಿ ಪತ್ರಿಕೆ ಮುಖಾಂತರ ತಿಳಿಸುವುದೇನೆಂದರೆ ಪ್ರತಿಯೊಬ್ಬರೂ ಈ ಪತ್ರಿಕೆಯನ್ನು ಓದಿ ಸಂಸ್ಥೆಯ ಸರ್ವತೋಮುಖ ಬೆಳವಣಿಗೆಯಲ್ಲಿ ನಿಮ್ಮ ಸಂಪೂರ್ಣ ಸಹಾಯ, ಸಹಕಾರ ನೀಡಬೇಕೆಂದುತಮ್ಮಲ್ಲಿ ವಿನಂತಿಸುತ್ತೇನೆ.

## ಚೈಲ್ಡ್ ಲೈನ್(1098)–ORBIT

ಚೈಲ್ಡ್ ಲೈನ್ (1098) ಭಾರತ ಸರಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಂದು ಯೋಜನೆಯಾಗಿದ್ದು, ಇದು ರಕ್ಷಣೆ ಮತ್ತು ಪೋಷಣೆ ಅಗತ್ಯತೆ ಇರುವ (0–18 ವರ್ಷ) ಮಕ್ಕಳಿಗಾಗಿ ದಿನದ 24 ಗಂಟೆಗಳ ಉಚಿತ, ತುರ್ತು ದೂರವಾಣಿ ಹಾಗೂ ಹೊರಸಂಪರ್ಕ ಸೇವೆಯನ್ನು ನೀಡುತ್ತಿದೆ. ಭಾರತಾದ್ಯಾದಂತ ಮಕ್ಕಳ ಸಹಾಯಕ್ಕಾಗಿ ಇರುವಂತಹ ಏಕೈಕ ಸಹಾಯವಾಣಿ ಆಗಿರುತ್ತದೆ. ಈ ಯೋಜನೆಯನ್ನು ಆರ್ಬಿಟ್ ಸಂಸ್ಥೆಗೆ 2010ರಲ್ಲಿ ಹುಮನಾಬಾದ ಮತ್ತು ಬಸವಕಲ್ಯಾಣ ತಾಲ್ಲೂಕಗಳಲ್ಲಿ ಸೇವೆಯೆನ್ನೋದಗಿಸುವಂತೆ ಸರ್ಕಾರದಿಂದ ಆದೇಶ ಪಡೆಯಾಲಾಗಿದೆ. ಮಕ್ಕಳ ಸಹಾಯವಾಣಿ ತಂಡದಿಂದ ಬೀದಿ ಮಕ್ಕಳು, ಬಾಲಕಾರ್ಮಿಕ, ಬಾಲ್ಯ ವಿವಾಹ, ಕಾಣಿಯಾದ ಮಕ್ಕಳು, ಭಿಕ್ಷಾಟನೆಯಲ್ಲಿ ತೋಡಗಿದ ಮಕ್ಕಳು, ಲೈಂಗಿಕ ದೌಜನ್ಯಕ್ಕೆ ಒಳಗಾದ ಮಕ್ಕಳಿಗೆ ಹಾಗು ರಕ್ಷಣೆ ಮತ್ತು ಪೋಷಣೆ ಅಗತ್ಯತೆ ಇರುವ ಮಕ್ಕಳಿಗೆ ದಿನದ 24 ಗಂಟೆ ಸೇವೆಯನ್ನು ಒದಗಿಸಲಾಗುತ್ತಿದೆ.

### ಜೂನ್ – 2022 ತಿಂಗಳಲ್ಲಿ ಆದ ಕಾರ್ಯಸಾಧನೆಯ ವರದಿ:

| ಕ್ರ. ಸಂಖ್ಯೆ | ಚಟವಟಿಕೆಗಳು | ಒಟ್ಟುಕಾರ್ಯಕ್ರಮ | ಫಲಾನುಭವಿಗಳ ಸಂಖ್ಯೆ |
|---|---|---|---|
| 01. | ಜಾಗೃತಿ ಕಾರ್ಯಕ್ರಮಗಳು | 06 | 680 |
| 02. | ತೆರೆದ ಮನೆ ಕಾರ್ಯಕ್ರಮ | 01 | 273 |
| 03. | ಸಿ.ಐ.ಒ | 01 | 20 |
| 04. | ವಿಶೇಷ ಕಾರ್ಯಕ್ರಮಗಳು | 01 | 960 |
| 05 | ಔಟ್‌ರೀಚ್‌ಕಾರ್ಯಕ್ರಮ | 11 | 460 |

### ಜೂನ್ – 2022 ತಿಂಗಳಲ್ಲಿ ಬಂದ ಪ್ರಕರಣಗಳು:

| ಕ್ರ. ಸಂಖ್ಯೆ | ಪ್ರಕರಣದ ವಿಧಗಳು | ಸಂಖ್ಯೆ |
|---|---|---|
| 01. | ಬಾಲ್ಯ ವಿವಾಹ (Child Marriage ) | 09 |
| 02. | ಬಾಲಕಾರ್ಮಿಕ (Child Labour) | 10 |
| 03. | ವೈದ್ಯಕೀಯ ನೇರವು (Medical help) | 02 |
| 04 | ಪುರ್ನವಸತಿ (Shelter) | 07 |
| 05. | ಶೈಕ್ಷಣಿಕ ಸಹಾಯ (Education Related) | 03 |
| 06 | ಇತರೆ (Other Case) | 02 |
| | ಒಟ್ಟು | 33 |






# ಸಮೃದ್ಧಿ ಕಾರ್ಯಕ್ರಮ

ಪ್ರತಿ ತಿಂಗಳು ಆರ್ಬಿಟ್ ಆಶ್ರಯದಲ್ಲಿ ಬರುವ 4 ಮಹಿಳಾ ಸ್ವ-ಸಹಾಯ ಸಂಘ, 32 ಮಹಿಳೆಯರಿಗೆ ಬಡತನವನ್ನು ನಿರ್ಮೂಲನೆಗೊಳಿಸುವುದರೊಂದಿಗೆ ಸಮಾಜದಲ್ಲಿ ಸ್ಥಾನಮಾನ ಮತ್ತು ಜೀವನ ಮಟ್ಟ ಹೆಚ್ಚಿಸಲು, ಸಾಂಪ್ರದಾಯಕ ಕಿರು ಉದ್ಧಿಮೆ, ಪರಿಸರ ಸ್ನೇಹಕಿರು ಉದ್ಧಿಮೆ, ಮತ್ತು ಕ್ರಿಯಾತ್ಮಕಕಿರು ಉದ್ದಿಮೆಗಳನ್ನು ಒದಗಿಸುವ ಕಾರ್ಯವನ್ನು ನಿರ್ವಹಿಸುತ್ತದೆ. ಕಡಿಮೆ ಬೆಲೆಗೆ ಉತ್ತಮಗುಣ ಮಟ್ಟದ ವಸ್ತುಗಳು ಸಿಗುವಂತೆ ಮಾಡವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮವು ಬೀದರ ಜಿಲ್ಲೆಯ 7 ತಾಲ್ಲೂಕಿಗೆ ಸೇರಿದ 20 ಹಳ್ಳಿಗಳಲ್ಲಿ 26 ಸಂಘಗಳ ಮಹಿಳೆಯರಿಗೆ ಸೇವೆಯನ್ನೊದಗೊಸುತ್ತಿದೆ.

| ದಿನಾಂಕ | ತರಬೇತಿಗಳ ವಿವರ | ಹಳ್ಳಿ | ಹಾಜರಿದ್ದ ಸದಸ್ಯರ ಸಂಖ್ಯೆ |
|---|---|---|---|
| **03.07.2022** | ಕಿರು ಉದ್ದಿಮೆ ತರಬೇತಿ | ಶಿವಪೂರ ಗಲ್ಲಿ | 18 |
| **27.06.2022** | ಕಿರು ಉದ್ದಿಮೆ ತರಬೇತಿ | ಭಾತಂಬ್ರಾ | 14 |

### ಜೂನ್ ತಿಂಗಳ ಸಾಲ ಮರು ಪಾವತಿ:-

| ಕ್ರಮ. ಸಂಖ್ಯೆ | ಅಸಲು | ಬಡ್ಡಿ | ಒಟ್ಟು |
|---|---|---|---|
| **01.** | ರೂ. 1,70,000.00 | ರೂ. 27,418.00 | ರೂ. 1,97,918.00 |

### ಜೂನ್ ತಿಂಗಳ ಸಾಲದ ಅರ್ಜಿಗಳ ವಿವರ

| ಕ್ರಮ. ಸಂಖ್ಯೆ | ಕಿರು ಉದ್ದಿಮೆ ಹೆಸರು | ಸದಸ್ಯರ ಸಂಖ್ಯೆ | ಒಟ್ಟು ಮೊತ್ತ |
|---|---|---|---|
| **01.** | ಕಿರಾಣಾಅಂಗಡಿ | 02 | ರೂ. 50,000.00 |
| **02.** | ಟೈಲರಿಂಗ್ | 21 | ರೂ. 5,25,000.00 |
| **03.** | ಆಡು ಸಾಗಾಣಿಕೆ | 04 | ರೂ. 100,000.00 |
| **04.** | ಬ್ಯೂಟಿಷೀಯನ್ | 03 | ರೂ. 75,000.00 |
| **05.** | ತರಕಾರಿ ವ್ಯಾಪಾರ | 01 | ರೂ. 25,000.00 |
| **06.** | ಎಮ್ಮೆ ಸಾಗಾಣಿಕೆ | 01 | ರೂ. 25,000.00 |
| | ಒಟ್ಟು | **32** | **ರೂ. 8,00,000.00** |






**ಫಲಿತಾಂಶ :-** ಈ ಯೋಜನೆಯಿಂದ ಸಾಲ ಪಡೆದುಕೊಂಡ ಅನೇಕ ಫಲಾನುಭವಿಗಳು ತಮ್ಮ ಮನೆಗಳಲ್ಲಿ ಮತ್ತು ಹಳ್ಳಿಗಳಲ್ಲಿ ಸಣ್ಣದಾಗಿ ಮತ್ತು ದೊಡ್ಡದಾಗಿಕಿರು ಉದ್ದಿಮೆಗಳನ್ನು ಮಾಡುತ್ತಿದ್ದಾರೆ. ಈ ಯೋಜನೆಯ ಉಪಯೋಗ ಪಡೆದು ತಮ್ಮ ಕುಟುಂಬದ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸರ್ಮಥರಾಗಿದ್ದಾರೆ.

# ಮಹಿಳಾ ಸಬಲೀಕರಣ ಯೋಜನೆ

ಮಹಿಳಾ ಸಬಲೀಕರಣಯೋಜನೆಯಲ್ಲಿ 96 ಹಳ್ಳಿಗಳು, 54 ಗ್ರಾಮ ಪಂಚಾಯತ್ತು, 3 ತಾಲ್ಲೂಕುಗಳಲ್ಲಿ, 295 ಸ್ವ-ಸಹಾಯ ಸಂಘಗಳು, 4500 ಮಹಿಳೆಯರು, 18 ಮಹಾ ಸಂಘಗಳು, 3 ತಾಲ್ಲೂಕು ಒಕ್ಕೂಟಗಳು ಮತ್ತು 1 ಜಿಲ್ಲಾ ಒಕ್ಕೂಟಗಳಲ್ಲಿ ಕಾರ್ಯನಿರ್ವಯಿಸುತ್ತಿದೆ.

ಬಡ ಮಹಿಳೆಯರ ಮತ್ತು ದುರ್ಬಲ ವರ್ಗದ ಕುಟುಂಬಗಳ ಜೀವನಗುಣ ಮಟ್ಟವನ್ನು ಸುಧಾರಿಸಲು ಮತ್ತು ಮಹಿಳೆಯರನ್ನು ಸಬಲೀಕರಣಗೊಳಿಸುವುದು ಈ ಯೋಜನೆಯ ಉದ್ದೇಶವಾಗಿದೆ. 96 ಗ್ರಾಮಗಳಿಂದ ಹೊರ ಹೊಮ್ಮಿದ ಮೌಲ್ಯಾಧಾರಿತ ನಾಯಕಿಯರು ಉತ್ತಮ ಆಡಳಿತದಲ್ಲಿ ಭಾಗವಹಿಸಿ ಸರ್ಕಾರಿ ಸೌಲಭ್ಯಗಳನ್ನು ಪಡೆದು, ಸಂಪನ್ಮೂಲ ಕ್ರೋಢಿಕರಣಗೊಳಿಸಿ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳುವಲ್ಲಿ ಸ್ವಾವಲಂಬನೆಯಾಗಿದ್ದಾರೆ.

| ಕ್ರಮ. ಸಂಖ್ಯೆ | ಚಟುವಟಿಕೆಗಳು | ಒಟ್ಟು |
|---|---|---|
| 1 | ತರಬೇತಿ | 12 |
| 2 | ಅರ್ಜಿಗಳು | 3 |
| 3 | ಯಶೋಗಾಥೆ | 6 |
| 4 | ಮಕ್ಕಳ ಸಹಾಯವಾಣಿಯಲ್ಲಿ ಉಲ್ಲೇಖಿತಗೊಂಡ ಸಮಸ್ಯೆ | 4 |
| 5 | ಸರಕಾರಿ ಸೌಲಭ್ಯ ಮತ್ತು ಈ – ಶ್ರಮ್‌ಕಾರ್ಡ | 251 |
| 6 | ಕ್ಯಾನ್ಸರ್ ಅರಿವು | 16 |
| 7 | ಕುಸಿದು ಹೋದ ಸಂಘ ಬೇಟಿ | 8 |
| 8 | ಇಲಾಖೆ, ಅಂಗನವಾಡಿ, ಪ್ರಾಥಮಿಕಆರೋಗ್ಯ, ಗ್ರಾಮ ಪಂಚಾಯತ್ ಮತ್ತು ಮನೆ ಬೇಟಿ | 251 |
| 9 | ವಿಶೇಷ ಕಾರ್ಯಕ್ರಮಗಳು | 14 |
| 10 | 1098 ಅರಿವಿನ ಕಾರ್ಯಕ್ರಮ | 9 |
| 11 | ಕುಟುಂಬದಲ್ಲಿ ಸಸಿ ನೆಟ್ಟವರ ಸಂಖ್ಯೆ | 37 |







## ನವಜೀವನ ಕಾರ್ಯಕ್ರಮ

ನವ ಜೀವನ ಕಾರ್ಯಮವು 2019ನೇಯ ಇಸವಿಯಲ್ಲಿ ಪ್ರಾರಂಭವಾಯಿತು, ಈ ಕಾರ್ಯಕ್ರಮವು ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರನ್ನು ಮುಖ್ಯವಾಹಿನಿಗೆ ತರಲು ಕಾರ್ಯನಿರ್ವಹಿಸುತ್ತಿದೆ. ಈಗಾಗಲೆ ಹುಮನಾಬಾದ್, ಚಿಟಗುಪ್ಪಾ, ಬಸವಕಲ್ಯಾಣ ಮತ್ತು ಹುಲಸೂರ ತಾಲ್ಲೂಕಗಳಲ್ಲಿ 196 ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಅವರ ಮನೆ ಭೇಟಿ

ಮೂಲಕ ಆಸ್ಪತ್ರೆಗೆ ಬರುವಂತೆ ಪ್ರೇರಣೆ ನೀಡುತ್ತಾ; ಅವರ ಏಳಿಗೆಗಾಗಿ ಶ್ರಮಿಸುತ್ತಿದ್ದೇವೆ.

ಪ್ರತಿ ತಿಂಗಳಂತೆ ಜೂನ್ ತಿಂಗಳಲ್ಲಿ ಮಾಡಿದ ಕಾರ್ಯ ಸಾಧನೆಗಳು ಇಂತಿವೆ; ಮಹಿಳಾ ಸ್ವ–ಸಹಾಯ ಸಂಘದ ಮಹಿಳೆಯರಿಗೆ, ಸಮುದಾಯದ ಜನರಿಗೆ ಮತ್ತು ವಿವಿಧ ಶಾಲೆಗಳ ಮಕ್ಕಳಿಗೆ ಹಾಗು ಅಧಿಕಾರಿಗಳಿಗೆ ಮಾನಸಿಕ ಆರೋಗ್ಯದ ಕುರಿತಂತ್ತೆ 20 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ, 35 ಮಾನಸಿಕ ಅಸ್ವಸ್ಥರ ಮನೆ ಭೇಟಿ ನೀಡಲಗಿತ್ತು, 12 ಜಿಲ್ಲಾ ಮಾನಸಿಕ ಅಸ್ವಸ್ಥರ ತಪಾಸಣೆಯಲ್ಲಿ ಭಾಗವಹಿಸಿ ಅವರ ಆರೋಗ್ಯದ ಕಾಳಜಿ ವಹಿಸುತ್ತಿದ್ದವೆ





## ಇತರೆ ಕಾರ್ಯಕ್ರಮದ ವಿವರಗಳು

| ಕ್ರಮ. ಸಂಖ್ಯೆ | ತಾಲ್ಲೂಕು | ಜಾಗೃತಿ ಕಾರ್ಯಕ್ರಮ | ಭಾಗವಹಿಸಿದವರ ಸಂಖ್ಯೆ | ಭಾಗವಹಿಸಿದ DMHPಶಿಬಿರದ ಸಂಖ್ಯೆ | ರೊಪಗೊಂಡ DPO's ಗಳ ಸಂಖ್ಯೆ | ಮನೆಗಳ ಭೇಟಿ | UDID ಕಾರ್ಡ ಪಡೆದವರ ಸಂಖ್ಯೆ |
|---|---|---|---|---|---|---|---|
| **01.** | ಹುಮನಾಬಾದ್ | 07 | 84 | 06 | 01 | 51 | 03 |
| **02.** | ಚಿಟಗುಪ್ಪಾ | 08 | 235 | 02 | 01 | 14 | – |
| **03.** | ಬಸವಕಲ್ಯಾಣ | 04 | 50 | 04 | 02 | 20 | – |
| | ಒಟ್ಟು | 90 | 369 | 12 | 04 | 85 | 03 |






# ಜನಜಾಗೃತಿ ಮಂಚ್

ಪ್ರಸ್ತುತ ಸಮುದಾಯದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಜನ ನಾಯಕರನ್ನು ಹುಟ್ಟು ಹಾಕುವುದರ ಮೂಲಕ ಅವರಿಗೊಂದು ವೇದಿಕೆಯನ್ನು ನಿರ್ಮಿಸಿ, ಶೋಷಿತ ಜನ ಸಮುದಾಯ ದಿಂದ ಜನ ನಾಯಕರನ್ನು ಗುರುತಿಸಿ, ಸಮುದಾಯದ ಅಭಿವೃದಿಯ ಏಳಿಗೆಗಾಗಿ ಜನರಿಗೆ ಆರೋಗ್ಯ, ಸಬಲೀಕರಣ ಮತ್ತು ಪರಿಸರದ ಕುರಿತು ಜಾಗೃತಿ ಮೂಡಿಸುವುದು ಜನ ಜಾಗೃತಿ ಮಂಚ್‌ನ ಮುಖ್ಯ ಉದ್ದೇಶವಾಗಿರುತ್ತದೆ. ಈ ಕಾರ್ಯಕ್ರಮವನ್ನು 40 ಹಳ್ಳಿಗಳಲ್ಲಿ, 20 ಗ್ರಾಮ ಪಂಚಾಯತ್ ಸೇರಿದಂತೆ 6 ತಾಲೂಕುಗಳಲ್ಲಿ ಕಾರ್ಯ ನಿರ್ವಯಿಸುತ್ತಿದೆ.

**ಜೂನ್ – 2022 ತಿಂಗಳ ಕಾರ್ಯಚಟುವಟಿಕೆಗಳು:**

| ಚಟುವಟಿಕೆಗಳು | ಒಟ್ಟು | ಭಾಗವಹಿಸಿದವರ ಸಂಖ್ಯೆ |
|---|---|---|
| ಗುಂಪುಗಳಿಗೆ ಭೇಟಿ ಮತ್ತು ಸಭೆ | | |
| ಮಕ್ಕಳು | 5 | 68 |
| ಕಿಶೋರಿ | 3 | 35 |
| ಭೇಟಿ ಮತ್ತು ಬಾಂಧವ್ಯ ನಿರ್ಮಾಣ | | |
| ಸರ್ಕಾರಿ ಇಲಾಖೆ, ಸಂಸ್ಥೆ, ಚುನಾಯಿತ ಪ್ರತಿನಿಧಿಗಳು.. | 54 | |
| ಸರಕಾರಿ ಸೌಲಭ್ಯ ,ಉದ್ಯೋಗಖಾತ್ರಿ | 2 | 25 |
| ಕ್ಯಾನ್ಸರ್ ಬಗ್ಗೆ ಅರಿವು | 1 | 10 |
| ಪರಿಸರ ಸಂರಕ್ಷಣೆ | 2 | 47 |
| ಕೈತೋಟ | 2 | 18 |
| ಜೀವನಕೌಶಲ್ಯ, ನಾಯಕತ್ವ | 1 | 12 |
| ಮಕ್ಕಳ ಹಕ್ಕು ಮತ್ತು ಸ್ವಚ್ಚತೆ | 2 | 30 |
| ಮನೆ ಭೇಟಿ | 16 | |

# ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ

ಕೌಶಲ್ಯಅಭಿವೃದ್ಧಿ ಕಾರ್ಯಕ್ರಮವು ಹಿಂದುಳಿದ ಸಮುದಾಯಗಳ ಯುವಕ/ಯುವತಿಯರು, ಮತ್ತು ಮಹಿಳೆಯರಿಗೆ ಉದ್ಯೋಗ ಕೌಶಲ್ಯ ತರಭೇತಿ ನೀಡುವುದರ ಮೂಲಕ ಅವರ ಕುಟುಂಬದ ಗುಣಮಟ್ಟ, ಆರೋಗ್ಯ ಮತ್ತು ಮೂಲ ಸೌಕರ್ಯಗಳನ್ನು ಪಡೆದುಕೊಳ್ಳಲು ಹಾಗು ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿ ಜೀವನ ಮಟ್ಟವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಸೇವೆ ಸಲ್ಲಿಸುತ್ತಿದೆ.

**ಜೂನ್– 2022ರ ಉದ್ಘಾಟನೆ ಮಾಡಿದ ತರಬೇತಿಗಳು:**

| ಕ್ರಮ. ಸಂಖ್ಯೆ | ತರಬೇತಿಗಳು | ಹಳ್ಳಿ | ಒಟ್ಟು ತರಭೇತಿದಾರರು |
|---|---|---|---|
| 01. | ಪೇಪರ್ ಬ್ಯಾಗ್ (ಬ್ಯಾಚ್IV) | ಶಿವಪೂರ ಗಲ್ಲಿ | 20 |
| 02. | ಬ್ಯೂಟಿಷೀಯನ್(ಬ್ಯಾಚ್IV) | ದೀಪಾಲಯ, ಸಂತಪೂರ | 12 |







**ಜೂನ್ –2022ರ ಕೌಶಲ್ಯ ಅಭಿವೃದ್ಧಿ ತರಬೇತಿಯ ಮುಕ್ತಾಯ ಕಾರ್ಯಕ್ರಮಗಳು:-**

| ಕ್ರಮ. ಸಂಖ್ಯೆ | ತರಬೇತಿಗಳು | ಹಳ್ಳಿ | ಒಟ್ಟು ತರಭೇತಿದಾರರು |
|---|---|---|---|
| 01. | ಪೇಪರ್ ಬ್ಯಾಗ್(ಬ್ಯಾಚ್ III) | ಎದನ್ ಕಾಲೋನಿ | 20 |
| 02. | ಪೇಪರ್ ಬ್ಯಾಗ್(ಬ್ಯಾಚ್ IV) | ಶಿವಪೂರ ಗಲ್ಲಿ | 20 |
| 03. | ಬ್ಯೂಟಿಷಿಯನ್ | ಗ್ರೇಸ್ ಕಾಲೋನಿ | 13 |
| 04. | ಟೈಲರಿಂಗ್ | ಮುದ್ನಾಳ | 16 |

## ಶೀಘ್ರ ಪತ್ತೆ ಹಚ್ಚುವಿಕೆ

ಪ್ರಸುತ್ತದಲ್ಲಿ ಅಂಗವಿಕಲತೆ ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದು, ಪ್ರಾರಂಭ ಹಂತದಲ್ಲಿಯೆ ವಿಕಲತೆಯನ್ನು ಗುರುತ್ತಿಸುವ ಕಾರ್ಯವೆ ಈ ಒಂದು ಕಾರ್ಯಕ್ರಮವಾಗಿದೆ. ಬೆಳವಣಿಗೆಯಲ್ಲಿ ಕುಂಠಿತವಾಗಿರುವ ಮಕ್ಕಳ ಕುಟುಂಬದೊಂದಿಗೆ ಕಾರ್ಯಸೇವೆ ಮಾಡುತ್ತಿದೆ. 3 ರಿಂದ6 ವರ್ಷದ ಮಕ್ಕಳು ತಮ್ಮ ಸಂತೋಷದ ದಿನಗಳನ್ನು ಹಾಗೂ ಶಿಕ್ಷಣ ಪಡೆಯುವಂತೆ ಮಾಡುವುದು, ಕುಂಟುಬದ ಸದಸ್ಯರ ಮನ ಬಲಪಡಿಸುವುದು. ವಿಕಲಚೇತನ ಮಕ್ಕಳು ಶಿಕ್ಷಣ ಪಡೆಯಲು ಅವರಿಗೆ ಶಾಲೆ ಅಥವಾ ಅಂಗನವಾಡಿ ಕೇಂದ್ರಗಳಿಗೆ ದಾಖಲಿಸುವುದು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಮೌಲ್ಯ ಮಾಪನ ಮಾಡಿ ಪೋಷಕರ ಸಹಾಯದಿಂದ ಸೂಕ್ತವಾದ ಚಟುವಟಿಕೆಗಳನ್ನು ಹಾಕಿಕೂಂಡು ಮನೆಯಲ್ಲಿ ಮತ್ತು ಇಐ ಕೇಂದ್ರದಲ್ಲಿ ಮಕ್ಕಳಿಗೆ ಚಟುವಟಿಕೆಯನ್ನು ಮಾಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಹುಮನಾಬಾದ್, ಬಸವಕಲ್ಯಾಣ, ಚಿಟಗುಪ್ಪಾ ತಾಲ್ಲೂಕಿನಲ್ಲಿ 0 ದಿಂದ 6 ವರ್ಷದಮಕ್ಕಳ ಬೆಳವಣಿಗೆಯಲ್ಲಿ ಕುಂಠಿತ ವಿರುವ ಒಟ್ಟು52 ಮಕ್ಕಳನ್ನು ಗುರುತ್ತಿಸುವ ಉದ್ದೇಶವನ್ನು ಹೊಂದಿದೆ.

**ಜೂನ್– 2022ರ ಸಾಧನೆಯ ವಿವರ:**

| ಕ್ರಮ. ಸಂಖ್ಯೆ | ಚಟುವಟಿಕೆಗಳು | ಸಂಖ್ಯೆ | ವಿವಿಧ ವಿಕಲತೆಗಳು | ಫಲಾನುಭವಿಗಳ ಸಂಖ್ಯೆ |
|---|---|---|---|---|
| 01. | ಹೊಸ ಮಕ್ಕಳ ಭೇಟಿ | 4 | ಅರಿವಿನ ವಿಳಂಬ | 15 |
| 02. | ಅನುಸರಣೆ ಭೇಟಿ | 34 | ಮೋಟಾರ್ ವಿಳಂಬ | 7 |
| 03. | ಅಂಗನವಾಡಿ ಭೇಟಿ | 17 | ಮಾತು ಮತ್ತು ಭಾಷೆಯ ವಿಳಂಬ – ಇತರೆ | 16 |
| 04. | ಶಾಲೆ ಭೇಟಿ | 1 | | |

| 05. | ಪರಿಸರ ದಿನ ಆಚರಣೆ | 3 | ಒಟ್ಟು | 38 |
|---|---|---|---|---|




## ಯಶಸ್ವಿ ಕಥೆ



**ವ್ಯಕ್ತಿಯ ಪರಿಚಯ**

**ಹೆಸರು :– ಸುಜಾತಾ**
**ಗಂಡನ ಹೆಸರು :– ಗಣಪತಿ**
**ಸ್ಥಳ :– ಹೀಲಾಲಪೂರ**
**ತಾ॥ ಹುಮನಾಬಾದ್ ಜಿ॥ ಬೀದರ**

**ಆರ್ಬಿಟ್ ಸಂಸ್ಥೆಯಿಂದ ಮಾಡಿದ ಸಹಾಯ :–**ಆರ್ಬಿಟ್ ಸಿಬ್ಬಂದಿ ವರ್ಗದವರತರಬೇತಿ ಮತ್ತು ಮಾಹಿತಿಗಳ ತರಬೇತಿಯಲ್ಲಿಎರಡು ತಿಂಗಳ ಬಟ್ಟೆತಯಾರಿಕೆಯಲ್ಲಿ ನಿರಂತರ ಭಾಗವಹಿಸಿ, ಬಟ್ಟೆಕತ್ತರಿಸಲು, ಹೊಲಿಯಲು ಪ್ರಾರಂಭಿಸಿದಳು. ತಾನುಕಲಿತಕೌಶಲ್ಯವನ್ನುಇತರರಿಗೂಕೂಡ ಹೇಳಿಕೊಡಲು ಪ್ರಾರಂಭಿಸಿದಳು. ಎಲ್ಲರನ್ನುಒಗ್ಗೂಡಿಸುವ ಮತ್ತುಛಲದ ಮಾತುಗಳಿಂದ ಶಿಬಿರಾಥಿಗಳನ್ನು ಹುರಿದುಂಬಿಸುತ್ತಿದ್ದರು. ಆರ್ಬಿಟ್ ಸಂಸ್ಥೆಯ ಸಹಾಯದಿಂದಕಲಿಯುತ್ತಿದ್ದ ಹೋಲಿಗೆ ಕೌಶಲ್ಯವನ್ನು ನಿರಂತರವಗಿ ಮನೆಯಲ್ಲಿಅಭ್ಯಾಸ ಮಾಡಿ, ಇವಾಗ ತಾನೆ ಬಟ್ಟೆಯನ್ನು ಕತ್ತರಿಸಿ ಪರಿಪೂರ್ಣಉಡುಗೆ ತಾಯರಿಸುತ್ತಿದ್ದಾಳೆ ಮತ್ತುಆಕೆಯಆರ್ಥಿಕ ಸ್ಥಿತಿ ಚೆತ್ತರಿಸಿಕೂಂಡಿದೆ.

**ಅನಸಿಕೆ :–** ಆರ್ಬಿಟ್ ಸಂಸ್ಥೆಯವರು ನನಗೆ ಮಾರ್ಗದರ್ಶನ, ಪ್ರೇರಣೆ ನೀಡಿ ನನಗೆ ಕಲಿಯಲು ಸಹಾಯ ಮಾಡಿ ನನ್ನ ಕಾಲ ಮೇಲೆ ನಾನೇ ನಿಂತು ಕೊಳ್ಳಲು ಸಹಕರಿಸಿದ ಸಂಸ್ಥೆಯವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ವ್ಯಕ್ತಿಯ ಹಿನ್ನಲೆ :–** ಶ್ರೀಮತಿ ಸುಜಾತಾ, ಗಂಡಗಣಪತಿ ಇವರು ಬಿ.ಪಿ.ಎಲ್ ಕಾರ್ಡ ಹೊಂದಿದ್ದು, ದಿನನಿತ್ಯದ ಆಹಾರ ಉಪಚಾರಕ್ಕೆ ಏನು ಕೊರತೆಯಿಲ್ಲ ಆದರೆ ಇವರಿಗೆ ಕುಟುಂಬದವರು ಮನೆಯಿಂದ ಹೊರಗೆ ಬಿಡುತ್ತಿರಲಿಲ್ಲ

ಇವರಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ. ಮಕ್ಕಳು ಓದುತ್ತಿದ್ದಾರೆ. ಇವರಿಗೆ ಸ್ವಲ್ಪ ಮಟ್ಟಿಗೆ ಮನೆಯಲ್ಲಿ ಬಟ್ಟೆ ಹೊಲಿಯಲು ಬರುತ್ತಿತ್ತು.

**ವ್ಯಕ್ತಿಯ ಸಮಸ್ಯೆಯ ಪರಿಹಾರ :–**ಶ್ರೀಮತಿ ಸುಜಾತಾ ಗಣಪತಿ ಇವರು ಮೊದಲು ತುಂಬ ಬಡವರಾಗಿದ್ದು, ಮಕ್ಕಳಿಗೆ ಶಿಕ್ಷಣ ಒದಗಿಸುವುದು ಕಷ್ಟಕರವಾಗಿತ್ತು. ಇವರು ಬೇರೆ ಊರಿನಲ್ಲಿ ಜೀವನ ನಡೆಸುತ್ತಿದ್ದರು, ಕಳೆದ 8 ವರ್ಷಗಳಿಂದ ತಮ್ಮ ಊರಿನಲ್ಲಿಯೇ ಮನೆ ಕಟ್ಟಿಕೊಂಡು ಆ ಮನೆಯಲ್ಲಿ ಜೀವನ ನಡೆಸುತ್ತಿದ್ದಾರೆ. ಇವರ ವಿದ್ಯಾಭ್ಯಾಸ B.A & B.ed ಆಗಿರುತ್ತದೆ. ಇವರು ಮಕ್ಕಳಿಗೆ ವಿದ್ಯಾಭ್ಯಾಸ ನೀಡುವುದು ತುಂಬಾ ಕಷ್ಟ ಹಾಗು ಕುಟುಂಬದವರು ಸಹ ಅವಳ ಆಸೆಗೆ ಅಡ್ಡಿಯಾಗುತ್ತಿದ್ದರು. ಜನವರಿ ತಿಂಗಳಲ್ಲಿ ಆರ್ಬಿಟ್ ಸಂಸ್ಥೆಯವರು ಬಟ್ಟೆ ತಯಾರಿಕ ಕಲಿಕಾ ಕೇಂದ್ರ ವತಿಯಿಂದ ಎರಡು ತಿಂಗಳ ಕಾಲ ತರಬೇತಿ ನಡೆಸುವ ವಿಷಯ ಕೇಳಿ, ಅವಳು ಈ ತರಬೇತಿಯನ್ನು ಪಡೆದುಕೊಳ್ಳಬೇಕು ಎಂಬ ಛಲ, ಧೈರ್ಯ ಅವಳದಾಗಿತ್ತು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮನೆ ಭೇಟಿ ನೀಡಿ ಅವರಿಗೆ ವಿಷಯದ ಅರಿವು ಮೂಡಿಸಿ ಪ್ರೇರಣೆ ಮತ್ತು ಮಾರ್ಗದರ್ಶನ ನೀಡಿಲಾಗಿತು.

# ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಾರ್ಯಕ್ರಮಗಳು

## ಸಮುದಾಯ ಆಧಾರಿತ ಪುನರ ವಸತಿ ಕಾರ್ಯಕ್ರಮ

ಸಿ.ಬಿ.ಆರ್. ಎನ್ನುವ ಕಾರ್ಯಕ್ರಮವು 2013 ರಿಂದ 2020 ರವರೆಗೆ ಸೇವಾ ಸಂಗಮ ಸಂಸ್ಥೆ ಅಡಿಯಲ್ಲಿ ಈ ಕಾರ್ಯಕ್ರಮ ಪ್ರಾರಂಭವಾಯಿತು. ವಿಕಲಚೇನರ ಮುಖ್ಯ ವಾಹಿನಿಗೆ ಬರುವುದು ಸಮಾಜದಲ್ಲಿ ಅವರಿಗೆ ಗೌರವ ಘನತೆ ಕಲ್ಪಿಸುವುವಂತೆ ಮಾಡುವುದು. ಈ ಕಾರ್ಯಕ್ರಮವು 1. ಆರೋಗ 2. ಶಿಕ್ಷಣ 3. ಜೀವನೋಪಾಯ 4. ಸಮಾಜ 5. ಸಬಲೀಕರಣ ಈ ಕಾರ್ಯಗಳ ಮೂಲಕ ವಿಕಲಚೇತರನ್ನು ಮುಖ್ಯ ವಾಹಿನಿಗೆ ತರುವಂತೆ ಮಾಡುವುದು. ನಮ್ಮ ಮುಖ್ಯ ಕಾರ್ಯವಾಗಿದೆ.

## ಜನಜಾಗೃತಿ ಮಂಚ್

**ಜೂನ್–2022**

ಪ್ರಸ್ತುತ ಸಮುದಾಯದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಈ ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಜನ ನಾಯಕರನ್ನು ಹುಟ್ಟು ಹಾಕುವುದರ ಮೂಲಕ ಅವರಿಗೊಂದು ವೇದಿಕೆಯನ್ನು ನಿರ್ಮಿಸಿ, ಶೋಷಿತ ಜನ ಸಮುದಾಯದಿಂದ ಜನ ನಾಯಕರನ್ನು ಗುರುತಿಸಿ, ಸಮುದಾಯದ ಸರ್ವತೂಮುಖ ಅಭಿವೃದಿಯ ಏಳಿಗೆಗಾಗಿ ದುಡಿಯುವುದು. ಜನರಿಗೆ ಆರೋಗ್ಯದ ಅರಿವು, ಸಬಲೀಕರಣ ಮತ್ತು ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಜನಜಾಗೃತಿ ಮಂಚ್‌ನ ಮುಖ್ಯ ಗುರಿ ಉದ್ದೇಶವಾಗಿದೆ. ಈ ಕಾರ್ಯ ಚಟುವಟಿಕೆಗಳನ್ನು ಸೇಡಂ ತಾಲ್ಲೂಕಿನ 8 ಗ್ರಾಮ ಪಂಚಾಯತ್ ಹಾಗೂ 15 ಹಳ್ಳಿಗಳಲ್ಲಿ ಕಾರ್ಯ ನಿರ್ವಯಿಸುತ್ತಿದೆ.

| ಕ್ರಮ. ಸಂಖ್ಯೆ | ಚಟುವಟಿಕೆಗಳು | ಒಟ್ಟು | ಭಾಗವಹಿಸಿದವರು ಸಂಖ್ಯೆ |
|---|---|---|---|
| 1. | ಗುಂಪುಗಳಿಗೆ ಭೇಟಿ ಮತ್ತು ಸಭೆ<br>ಮಕ್ಕಳು<br>ಕಿಶೋರಿ | <br>4<br>1 | <br>39<br>09 |
| 2. | ಸರಕಾರಿ ಸೌಲಭ್ಯ ,ಉದ್ಯೋಗಖಾತ್ರಿ | 2 | 12 |
| 3 | ಕ್ಯಾನ್ಸರ್ ಬಗ್ಗೆ ಅರಿವು | 3 | 35 |

| | | | |
|---|---|---|---|
| **4.** | ಪರಿಸರ ಸಂರಕ್ಷಣ | **3** | **25** |
| **5** | ಜೀವನಕೌಶಲ್ಯ, ನಾಯಕತ್ವ | **7** | **19** |
| **6.** | ಮಕ್ಕಳ ಹಕ್ಕು ಮತ್ತು ಸ್ವಚ್ಚತೆ | **2** | **30** |
| **7.** | ಮನೆ ಭೇಟಿ | **60** | **80** |

# ಮಹಿಳಾ ಸಬಲೀಕರಣ(ಅಭಿವೃದ್ದಿ) ಕಾರ್ಯಕ್ರಮ

ೀವಾ ಸಂಗಮ ಸಂಸ್ಥೆಯು ಕಲಬುರಗಿ ಜಿಲ್ಲೆಯ ಚಿತ್ತಾಪೂರ, ಆಳಂದ, ಸೇಡಂ, ಮತ್ತು ಕಲಬುರಗಿ ತಾಲ್ಲೂಕುಗಳಲ್ಲಿ 8 ಗ್ರಾಮ ಪಂಚಾಯಿತಗಳ 10 ಹಳ್ಳಿಗಳಲ್ಲಿ ಹಿಂದುಳಿದ ಬಡ ಮಹಿಳೆಯರ ಅಭಿವೃದ್ದಿಗೊಸ್ಕರ ಕಾರ್ಯ ನಿರ್ವಹಿಸುತ್ತಿದೆ. ಮುಖ್ಯವಾಗಿ ಮಹಿಳೆಯರ ಸರ್ವತೋಮೂಖ ಸಮಗ್ರ ಅಭಿವೃದ್ದಿಗಾಗಿ ಪ್ರಯತ್ನಿಸುವುದು ಮುಖ್ಯ ಗುರಿಯಾಗಿದೆ. ಮಹಿಳೆಯರು ಸ್ವಯಂ ಉದ್ಯೋಗ ಕೈಗೋಳ್ಳಲು, ನಾಗರಿಕ ಆರೋಗ್ಯ ಹಾಗೂ ಕೌಟುಂಬಿಕ ಕಲ್ಯಾಣದಂತಹ ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ಸಂಘದ ಮಹಿಳೆಯರು ಸರ್ಕಾರದ ವಿವಿಧ ಯೋಜನೆಗಳನ್ನು ಪಡೆದು ಅಭಿವೃದ್ಧಿ ಹೊಂದುವುದು ಮುಖ್ಯ ಉದ್ದೇಶವಾಗಿದೆ. ಮುಖ್ಯವಾಗಿ ಪರಿಸರ ದಿನಾಚಾರಣೆ, ಕ್ಯಾನ್ಸರ್ ಬಗ್ಗೆ, ಕಿರು ಉದ್ದಿಮೆ ಸಾಲದ ಬಗ್ಗೆ, ಜೊಬ್ ಕಾರ್ಡ ಬಗ್ಗೆ, ಸರಕಾರಿ ಸೌಲಭ್ಯಗಳ ಬಗ್ಗೆ, ಪೌಷ್ಟಿಕ ಅಹಾರದ ಬಗ್ಗೆ, ಆರೋಗ್ಯ ನಿರ್ಮೂಲನೆ ಬಗ್ಗೆ ಮಾಹಿತಿ ಹಾಗೂ ವಿವಿಧ ತರಬೇತಿಗಳನ್ನು ಹಮ್ಮೀಕೊಂಡು 65 ಸಂಘಗಳನ್ನು ಭೆಟಿ ಮಾಡಿ 168 ಸಸಿಗಳನ್ನು ವಿತರಿಸಲಾಗಿದೆ.



| ಕ್ರಮ. ಸಂಖ್ಯೆ | ಚಟುವಟಿಕೆಗಳು | ಒಟ್ಟು | ಭಾಗವಹಿಸಿದವರ ಸಂಖ್ಯೆ |
|---|---|---|---|
| 1. | ಪರಿಸರ ದಿನಾಚರಣೆ | 3 | 55 |
| 2. | ಸಂಘಗಳ ಸಭೆ | 30 | 125 |
| 3. | ಪರಿಸರ ಬಗ್ಗೆ ಮಾಹಿತಿ | 3 | 57 |
| 4. | ಜೋಬ್ ಕಾರ್ಡ ಬಗ್ಗೆ ಮಾಹಿತಿ | 2 | 26 |
| 5. | ಕಿರು ಉದ್ದೇಮೆ ಸಾಲ | 2 | 30 |
| 6. | ಮನೆ ಭೇಟಿ | 20 | 55 |





## ಪೌಷ್ಠಿಕ ಯೋಜನೆಯ ಜೂನ್ ತಿಂಗಳ ಕಾರ್ಯ ಸಾಧನೆ

ನವೆಂಬರ್ 2022ರ ಅಂತ್ಯದೊಳಗೆ 1 ಜಿಲ್ಲೆಯ, 1 ತಾಲ್ಲೂಕಿನ, 10 ಗ್ರಾಮ ಪಂಚಾಯಿತಿಗಳನ್ನೊಳಗೊಂಡ ದುರ್ಬಲ ವರ್ಗದ ಸುಮಾರು 4100 ಕುಟುಂಬಗಳು ಪೌಷ್ಠಿಕಾಂಶ ಮತ್ತು ಆರೋಗ್ಯದ ಬಗ್ಗೆ ಸರಿಯಾದ ಮಾಹಿತಿ ಹೊಂದಿ ತಮ್ಮ ಕುಟುಂಬಗಳಲ್ಲಿ ಅನುಷ್ಠಾನಗೊಳಿಸುವ ಮೂಲಕ ಗುಣಾತ್ಮಕ ಜೀವನ ನಡೆಸುತ್ತಿದ್ದಾರೆ.

ಕಿಂಡರ್ ಮೀಷನ್ ಕ್ರಾಸ್ ಸಂಸ್ಥೆ ಬೆಂಗಳೂರು ಮತ್ತು ಸೇವಾಸಂಗಮ ಸಂಸ್ಥೆ, ಕಲಬುರಗಿ ಸಂಯುಕ್ತಾಶ್ರಯದಲ್ಲಿ ಪೌಷ್ಟಿಕ ಯೋಜನೆಯು ಸುಮಾರು 7 ವರ್ಷಗಳಿಂದ ಕಲಬುರಗಿ ಜಿಲ್ಲೆಯ 10 ಪಂಚಾಯತಗಳ 48 ಹಳ್ಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯ ಮುಖ್ಯ ಉದ್ದೇಶ ಅಪೌಷ್ಠಿಕತೆಯನ್ನು ನಿರ್ವಹಣೆ ಮಾಡುವುದು ದುರ್ಬಲ ವರ್ಗದಕುಟುಂಬಗಳು

ಪೌಷ್ಟಿಕಾಂಶ ಮತ್ತು ಆರೋಗ್ಯದ ಬಗ್ಗೆ ಸರಿಯಾದ ಮಾಹಿತಿ ಹೊಂದಿ ತಮ್ಮ ಕುಟುಂಬಗಳಲ್ಲಿ ಅನುಷ್ಠಾನಗೊಳಿಸುವುದು. ಗುಣಾತ್ಮಕ ಜೀವನ ನಡೆಸುವಂತೆ ಸ್ಥಳೀಯವಾಗಿ ದೊರಕುವ ಪೌಷ್ಟಿಕ ಆಹಾರದ ಬಗ್ಗೆ ಜ್ಞಾನವನ್ನು ಗಳಿಸಿ ಜಾಗೃತರಾಗಿ, ಕುಟುಂಬದ ಎಲ್ಲಾ ಸದಸ್ಯರು ಪೌಷ್ಟಿಕ ಆಹಾರ ಸೇವಿಸುವಂತೆ ಅರಿವು ಮೂಡಿಸುವುದು. ಪೌಷ್ಟಿಕ ಆಹಾರದ ತಯಾರಿಕೆ, ಕೈತೋಟ. ತಾಯಿ ಮತ್ತು ಮಗುವಿನ ಆರೋಗ್ಯ, ಬಾಲ್ಯ ವಿವಾಹದ ತಡೆಗಟ್ಟುವಿಕೆ, ತಾಯಿಎದೆ ಹಾಲಿನ ಮಹತ್ವ ಸ್ನೇಹಾ ಕ್ಲೀನಿಕ ಮತ್ತು ಮಕ್ಕಳ ಹಕ್ಕುಗಳು ಬಗ್ಗೆ ಹಾಗೂ ಈ ಜನರಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. 0–6 ವರ್ಷದ ಮಕ್ಕಳಲ್ಲಿ ಅಪೌಷ್ಟಿಕತೆಯನ್ನು ಗುರುತಿಸಿ ಚಿಕಿತ್ಸೆ ಕುಡಿಸುವುದು, ಗರ್ಭಿಣಿ, ಬಾಣಂತಿಯರಿಗೆ. ಕಿಶೋರಿಯರಿಗೆ ಅಪೌಷ್ಟಿಕತೆ ಬಗ್ಗೆ ಮಾಹಿತಿ ನೀಡಿ ಜಾಗೃತಿಗೊಳ್ಳಿಸುವುದು ಈ ' ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.

| ಕ್ರಮ. ಸಂಖ್ಯೆ | ಚಟುವಟಿಕೆಗಳು | ಒಟ್ಟು | ಭಾಗವಹಿಸಿದವರ ಸಂಖ್ಯೆ |
|---|---|---|---|
| 1. | ಪೌಷ್ಟಿಕ ಆಹಾರದ ತಯಾರಿಕೆ ಕುರಿತು ತರಬೇತಿ | 3 | 58 |
| 2. | ಆರೋಗ್ಯ ಸೇವೆಗಳ ಬಗ್ಗೆ ತರಬೇತಿ | 2 | 46 |
| 3. | ಕೈತೋಟದ ಬಗ್ಗೆ ತರಬೇತಿ | 2 | 28 |
| 4. | ಸಂಕ್ರಾಮಿಕ ಮತ್ತು ಅಸಂಕ್ರಮಿಕ ರೋಗಗಳ ಬಗ್ಗೆ ತರಬೇತಿ | 3 | 67 |
| 5. | ಬಾಲ್ಯ ವಿವಾಹದ ಬಗ್ಗೆ ತರಬೇತಿ | 2 | 28 |
| 6. | ತಾಯಿ ಎದೆ ಹಾಲಿನ ಬಗ್ಗೆ ತರಬೇತಿ | 1 | 16 |
| 7. | ಸರಕಾರಿ ಸೌಲಭ್ಯಗಳ ಬಗ್ಗೆ ತರಬೇತಿ | 2 | 25 |
| 8. | ಸ್ನೇಹಾ ಕ್ಲೀನಿಕ ಬಗ್ಗೆ ತರಬೇತಿ | 3 | 73 |
| 9. | ಆರೋಗ್ಯದ ಮತ್ತು ನೈರ್ಮಲ್ಯ ಬಗ್ಗೆ ತರಬೇತಿ | 3 | 72 |
| 10. | ತಾಯಿ & ಮಗುವಿನ ಆರೋಗ್ಯದ ಬಗ್ಗೆ ತರಬೇತಿ | 2 | 25 |
| 11. | ಉದ್ಯೋಗ ಖಾತರಿ ಬಗ್ಗೆ ತರಬೇತಿ | 1 | 26 |
| 12. | ಆಹಾರ ಹಕ್ಕಿನ ಬಗ್ಗೆ ತರಬೇತಿ | 1 | 25 |
| 13 | ಮಾಹಿತಿ ಹಕ್ಕಿನ ಬಗ್ಗೆ ತರಬೇತಿ | 2 | 50 |





# ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ

ಗುಲಬರ್ಗಾ ಧರ್ಮಕ್ಷೇತ್ರದ 4 ಜಿಲ್ಲೆಗಳಿಗೆ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವದರ ಮೂಲಕ ಜಾಗೃತಿ, ಕ್ಯಾನ್ಸರ್ ಒಂದು ಭಯಾನಕ ಕಾಯಲೆಯಾಗಿದ್ದು ಇದರಿಂದ ರೋಗಿಯು ಮಾತ್ರ ವಲ್ಲದೆ ಇಡೀ ಕುಟುಂಬವು ಆರ್ಥಿಕ ಹೊರೆಯನ್ನು ಅನುಭವಿಸುತ್ತದೆ. ಈ ರೋಗವು ಜನರ ಜೀವನ ಶೈಲಿಯಿಂದ ಉಂಟಾಗುತ್ತದೆ. ಆರಂಭದಲ್ಲೆ ಚಿಕಿತ್ಸೆ ನೀಡಿದರೆ ಗುಣಮುಖವಾಗ ಬಹುದು. ಆದ್ದರಿಂದ ಕ್ಯಾನ್ಸರ್ ಕಾರಣಗಳು ಪತ್ತೆ ಹಚ್ಚಿ ಚಿಕಿತ್ಸೆ ಮತ್ತು ಆರಂಭಿಕ ಪತ್ತೆ ಚಿಕಿತ್ಸೆ ಮತ್ತು ಅದನ್ನು ತೆಡೆಗಟ್ಟುವ ಮೂಲಕ ಮಾರಣಾಂಕ ಕಾಯಿಲೆಯ ಕ್ಯಾನ್ಸರ್ಬೇದರಿಕೆಯನ್ನು ತಗ್ಗಿಸುವ ಸಮಾಜ ತಡೆಗಟ್ಟಳು ಜಾಗೃತಿ ಮೂಡಿಸುವುದು. ಈ ಯೋಜನೆಯ ಮುಖ್ಯ ಉದ್ದೇಶ ಕ್ಯಾನ್ಸರ್ ವಿರುದ್ದ ಹೋರಾಡಲು ಅನೇಕರು ಬಲಿಪಾಶುಗಳನ್ನು ತಡೆಯಲು ಎಲ್ಲಾ ಜನರಲ್ಲಿ ಜಾಗೃತಿ ಮೂಡಿಸುವುದು. ಈ ಕಾರ್ಯಕ್ರಮವು ಗುಲಬರ್ಗಾ ಜಿಲ್ಲೆಯ 4 ತಾಲ್ಲೂಕಗಳಲ್ಲಿ ಜಾಗೃತಿ ಕಾರ್ಯಕ್ರಮವನ್ನು ಮೂಡಿಸುತ್ತಿದ್ದೇವೆ.

| ಕ್ರಮ. ಸಂಖ್ಯೆ | ಚಟುವಟಿಕೆಗಳು | ಒಟ್ಟು | ಭಾಗವಹಿಸಿದವರ ಸಂಖ್ಯೆ |
|---|---|---|---|
| 1. | ಕ್ಯಾನ್ಸರ್ ಬಗ್ಗೆ ಅರಿವಿನ ಕಾರ್ಯಕ್ರಮ | 29 | 850 |
| 2. | ಪರಿಸರ ದಿನಾಚರಣೆ / ವನಮೋಹೋತ್ಸವ | 6 | 550 |
| 3. | ಸ್ಥಳೀಯ ಹಣ ಸಂಗ್ರಹಣೆ | 2 | 220 |
| 4. | ಕ್ಯಾನ್ಸರ್ ರೋಗಿಯ ತಪಾಸಣೆ | 2 | |
| 5 | ಮನೆ ಭೇಟಿ | 2 | |





# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

ಪ್ರಸುತ್ತದಲ್ಲಿ ಅಂಗವಿಕಲತೆಯ ಪ್ರಮಾಣ ದಿನ ದಿಂದ ದಿನಕ್ಕೆ ಹೇಚ್ಚಾಗುತ್ತಿದು, ಪ್ರಾರಂಭ ಹಂತದಲ್ಲಿಯೆ ವಿಕಲತೆಯನ್ನು ಗುರುತ್ತಿಸುತ್ತವೆ. ಬೇಳವಣಿಗೆಯಲ್ಲಿ ಕುಂಟಿತ ವಾಗಿರುವ ಮಕ್ಕಳ ಕುಟುಂಬದೂಂದಿಗೆ ಕಾರ್ಯಕ್ರಮ ಮಡುತ್ತವೆ. 3 ರಿಂದ 6 ವರ್ಷದ ಮಕ್ಕಳು ತಮ್ಮ ಸಂತೋಷದ ದಿನಗಳು ಹಾಗೂ ಶಿಕ್ಷಣ ಪಡೆಯುವಂತೆ ಮಾಡುವುದು. ಕುಂಟುಬದ ಸದಸ್ಯರ ಮನ ಬಲಪಡಿಸುವುದು. ವಿಕಲಚೇತನ ಮಕ್ಕಳು ಶಿಕ್ಷಣ ಪಡೆಯುವುದು ಅವರಿಗೆ ಶಾಲೆ ಅಥವಾ ಅಂಗನವಾಡಿ ಕೇಂದ್ರಗಳಿಗೆ ದಾಖಲಿಸುವುದು. ಬೇಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳಿಗೆ ಮೌಲ್ಯ ಮಾಪನ ಮಾಡಿ ಪೋಷಕರ ಸಹಾಯ ದಿಂದ ಸೂಕ್ತವಾದ

ಚಟುವಟಿಕೆಗಳನ್ನು ಹಾಕಿಕೊಂಡು ಮನೆಯಲ್ಲಿ ಮತ್ತು ಇಐ ಕೇಂದ್ರದಲ್ಲಿ ಮಕ್ಕಳಿಗೆ ಚಟುವಟಿಕೆಯನ್ನು ಮಾಡಿಸೂವುದು. ಆರೋಗ್ಯ ಕೇತ್ರದಲ್ಲಿ ಕೆಲಸಮಾಡುವ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತರು, ಕೀರಿಯ ಆರೋಗ್ಯ ಸಹಾಯಕರಿಗೆ ತರಬೇತಿ ನೀಡುವುದು ಹಾಗೂ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಪೋಷಕರಿಗೆ ಮಕ್ಕಳ ಪಾಲನೆ ಮತ್ತು ಪೋಷಣೆ ಕುರಿತು ತರಬೇತಿ ಕೈಗೋಳ್ಳುವುದು. ವಿಕಲಚೇತನ ಮಕ್ಕಳಿಗೆ ಸರಕಾರ ದಿಂದ ಸಿಗುವಂತಹ ಸೌಲಭ್ಯಗಳನ್ನು ಒದಗಿಸುವುದು, ಸಮುದಾಯದ ಜನರು, ವಿಧ್ಯಾರ್ಥಿಗಳು, ಸ್ವ-ಸಹಾಯ ಸಂಘಗಳಲ್ಲಿ ಅರಿವಿನ ಕಾರ್ಯಕ್ರಮ ನಡೆಸುವುದು. ಕಲಬುರಗಿ ನಗರ ಮತ್ತು ತಾಲ್ಲೂಕು ಹಾಗೂ ಆಳಂದ ತಾಲ್ಲೂಕಿನಲ್ಲಿ 0 ದಿಂದ 6 ವರ್ಷದ ಬೆಳವಣಿಗೆಯಲ್ಲಿ ಕುಂಠಿತ ವಿರುವ ಒಟ್ಟು 170 ಮಕ್ಕಳನ್ನು ಗುರುತ್ತಿಸುವ ಉದ್ದೇಶವನ್ನು ಹೊಂದಿದೆ.

| ಕ್ರಮ. ಸಂಖ್ಯೆ | ಕಾರ್ಯಕ್ರಮ / ಚಟುವಟಿಕೆ | ಫಲಾನುಭವಿಗಳ ವಿವರ/ಪಡೆದವರು ಸಂಖ್ಯೆ | ಮೋತ್ತ |
|---|---|---|---|
| 1. | ಮನೆ ಆಧಾರಿತ ಪ್ರಚೋದನೆಚಟುವಟಿಕೆ | 107 | |
| 2. | ಇಐ ಕೇಂದ್ರಆಧಾರಿತ ಪ್ರೋದನೆಚಟುವಟಿಕೆ | 4 | |
| 3. | ಫೋನ ಕರೆಗಳು | 10 | |
| 4. | ಬ್ಯಾಂಕ್ ಖಾತೆ | 01 | |
| 5. | ಪಿಂಚಣಿ | 02 | 3400 |
| 6. | ಹೊಸ ಮಕ್ಕಳ ಗುರುತ್ತಿಸುವಿಕೆ | 4 | |
| 7. | ವೈದ್ಯರತಪಾಸಣೆ | 3 | |
| 8. | ಹೊಸ ಮಕ್ಕಳ ಮೌಲ್ಯಮಾಪನ | 2 | |
| 9 | ಪರಿಸರ ದಿನಾರಣೆ | 1 | |





**ಉಜ್ಜೀವನ ಕಾರ್ಯಕ್ರಮವ**

ವಾತಾವರಣ ಮತ್ತು ಹವಾಮಾನ ಹೊಂದಾಣಿಕೆಯ ಕೃಷಿ ಮತ್ತು ಜೀವನೋಪಾಯಗಳನ್ನು ಪೋಷಿಸುವುದು ಮತ್ತು ಭದ್ರಪಡಿಸುವುದು. ಮಿಸೋರಿಯೆರ್ ಮತ್ತು ಕಾರಿತಾಸ್ ಇಂಡಿಯಾ ಸಂಯುಕ್ತ ಆಶ್ರಯದಲ್ಲಿ ಉಜ್ಜೀವನ ಕಾರ್ಯಕ್ರಮವು 5 ಪಂಚಾಯತ್ 2 ಹೋಬಳಿ 10 ಗ್ರಾಮಗಳಲ್ಲಿ ಕಾರ್ಯಕ್ರಮವನ್ನು ರೂಪುಗೊಂಡಿದೆ. ರೈತರಿಗೆ ಸಾವಯವ ಕೃಷಿ, ಸಮಗ್ರ ಕೃಷಿ ಮತ್ತು ಹವಾಮನ ವಾತವರಣಕ್ಕೆ ತಕ್ಕಂತೆ ಕೃಷಿ ಮಾಡುವುದು. ಹಿಂದಉಳಿದ ಸಮುದಾಯದ ಜನರಿಗೆ ಸರಕಾರಿ ಸೌಲಭ್ಯೆ ಸಿಗುವಂತೆ ಹಾಗೂ ನೇರವಾಗಿ ಅಧಿಕಾರಿಗಳ ಜೋತೆ ಸಂಪರ್ಕ ಸ್ವಯಂ ಪ್ರೇರೆತವಾಗಿ ಹೋಗುವುದು ಮತ್ತು ಯೋಜನೆಗಳ ಬಗ್ಗೆ ಮಾಹಿತಿ ಪಡೆಯುದು.

| ಕ್ರಮ. ಸಂಖ್ಯೆ | ಕಾರ್ಯಚಟುವಟಿಕೆ | ತರಬೇತಿಗಳು | ಭಾಗವಹಿಸಿದವರ ಸಂಖ್ಯೆ |
|---|---|---|---|
| **1.** | ಸುಸ್ತಿರ ಜೀವನೊಪಯದ ಕುರಿತು ಜಾಗೃತಿ ಬಗ್ಗೆ ಮಾಹಿತಿ | 2 | 60 |
| **2.** | ಸುಗ್ಗಿಯಾ(ಕಟಾವಿನ) ನಂತರ ಕೃಷಿ ತಂತ್ರಜ್ಞನಳು ಜಾಗೃತಿ ಸಭೆ | 2 | 55 |
| **3.** | ಸ್ವಯಂ ಸೇವಕರಿಗೆ ಸಾಮರ್ಥ್ಯ ವೃದ್ದಿ ಜಾಗೃತಿ ಸಭೆ | 1 | 25 |
| **4.** | ಸಮಗ್ರ ಕೃಷಿ ಬಗ್ಗೆ ಮಾಹಿತಿ | 3 | 70 |
| **5.** | ಗ್ರಾಮಪಂಚಾಯತ್ ಸದ್ಯಸರ ಜೋತೆ & ವಸೆ ಕಾರ್ಮಿಕರ ನಡುವಿನ ಇಂಟಪೊರ್ಸ ಯೋಜನೆಗಳ ಕುರಿತು ಮಾಹಿತಿ ಕಾರ್ಯಕ್ರಮ | 1 | 20 |
| **6.** | ಸಮುದಾಯದ ನಾಯಕರೊಂದಿಗೆ ಕೃಷಿ ಚಟುವಟಕೆ ಬಗ್ಗೆ ಮಾಹಿತಿ | 2 | 45 |
| **7.** | ಮಹಿಳಾ ಸಂಘದವರಿಗೆ ಕೌಶಲ್ಯ ಅಭಿವೃದ್ದಿ ಬಗ್ಗೆ ಮಾಹಿತಿ | 2 | 40 |
| **8.** | ಒಣ ಬೇಸಾಯದ ಕೃಷಿಯತರ ಕುರಿತು ಜಾಗೃತಿ ಸಭೆ | 1 | 30 |
| **9.** | ಸಮುದಾಯದ ಸಮಸ್ಯೆ ಕುರಿತು ಗುರುತಿಸುವುದು. | 3 | 72 |
| **10.** | ವಿಶ್ವ ಪರಿಸರ ದಿನಾಚರಣೆ ಮತ್ತು ಸಸಿ ವಿತರಣೆ ಕಾರ್ಯಕ್ರಮ | 10 | 450 |
| **11.** | ಸೇವಾ ಸಂಗಮ ಮತ್ತು ಆರ್ಬೀಟ್ ಸಂಸ್ಥೆ ಸಿಬ್ಬಂದಿ ವರ್ಗದವರಿಗೆ ದೃಷ್ಟಿಕೋನ ಸಭೆ | 1 | 45 |





# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಕಾರ್ಯ ಸಾಧನೆ

## ಮಾನಸಿಕ ಅಸ್ವಸ್ಥರಿಗೆ ಮುಖ್ಯ ವಾಹಿನಿಗೆ ತನ್ನಿ

### ಮಾನಸಿಕ ಅಸ್ವಸ್ಥರ ಪೋಷಕರಿಗೆ ತರಬೇತಿ ಕಾರ್ಯಕ್ರಮ

**ಬಸವಕಲ್ಯಾಣ :** ತಾಲೂಕಿನ ಪರ್ತಾಪೂರ ರಸ್ತೆಗೆ ಸಾಗುವ ದಾರಿ ಮಧ್ಯೆ ಇರುವ ಸಂತ ಅಂತೋಣಿ ಬಾಲಕರ ಆಶ್ರಮದಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರಿಗೆ ಇಲ್ಲಿಯ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮ ಜರುಗಿತು.

ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಬೆಂಗಳೂರಿನ ಎಪಿಡಿ ಸಂಸ್ಥೆಯ ಸಂಯೋಜಕ ಸಂತೋಷ ಮಾತನಾಡಿ, ಮಾನಸಿಕ ರೋಗವು ಯಾರಿಗೂ ಬರಬಹುದು. ಮಾನಸಿಕ ಕಾಯಿಲೆಯ ಲಕ್ಷಣಗಳು ಸ್ಕಿಜೋಫ್ರಿನಿಯಾ, ಮಿನಿಯಾ, ಖಿನ್ನತೆ, ಆತಂಕದ ವಿಧಗಳ ಕುರಿತು ತಿಳಿವಳಿಕೆ ನೀಡಿದರು. ಪೋಷಕರು ಮಾನಸಿಕ ರೋಗಿಗಳನ್ನು ಹೇಗೆ ನೋಡಿ ಕೊಳ್ಳಬೇಕು. ಅಲ್ಲದೆ ಮಾನಸಿಕ ಅಸ್ವಸ್ಥರಿಗೆ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕು. ಅವರನ್ನು ಮುಖ್ಯ ವಾಹಿನಿಗೆ ತರಲು ತಾವುಗಳು ಕೈಜೋಡಿಸಿ ಮಾನಸಿಕರನ್ನು ರೋಗದಿಂದ ಮುಕ್ತಗೊಳಿಸಿ ಅವರು ಸಹ ಉತ್ತಮ ಜೀವನ ನಡೆಸಲು ತಮ್ಮ ಪಾತ್ರ ಬಹಳ ಪ್ರಮುಖ ಎಂದು ಮಾಹಿತಿ ನೀಡಿದರು. ನವ ಜೀವನ ಕಾರ್ಯಕ್ರಮದ ಸಂಯೋಜಕಿಯರಾದ ಸಿಸ್ಟರ್ ಎಲ್ಸಾ ಅವರು ಸ್ವಾಗತಿಸಿದರು. ಕಾರ್ಯಕರ್ತರಾದ ಹಣಮಂತ ಪ್ರಾರ್ಥನೆ ಗೀತೆ ಹಾಡಿದರು. ಅರುಣಕುಮಾರ ನಿರೂಪಿಸಿದರೆ, ಸಂಜೀವಕುಮಾರ ಪೂಜಾರಿ ವಂದಿಸಿದರು.




ಬಸವಕಲ್ಯಾಣ ತಾಲೂಕಿನ ಪರ್ತಾಪೂರ ರಸ್ತೆಗೆ ಸಾಗುವ ದಾರಿ ಮಧ್ಯೆ ಇರುವ ಸಂತ ಅಂತೋಣಿ ಬಾಲಕರ ಆಶ್ರಮದಲ್ಲಿ ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರಿಗೆ ಇಲ್ಲಿಯ ಆರ್ಬಿಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಒಂದು ದಿನದ ತರಬೇತಿ ಕಾರ್ಯಕ್ರಮ ಜರುಗಿತು.

## ಮಂಗಲಗಿಯಲ್ಲಿ ಕೌಶಲ್ಯ ಅಭಿವೃದ್ಧಿ ಕುರಿತು ತರಬೇತಿ




ಭಾರತ ವೈಭವ ಸುದ್ದಿ

ಚಿಟಗುಪ್ಪ: ತಾಲೂಕಿನ ಮಂಗಲಗಿ ಗ್ರಾಮದಲ್ಲಿ ಹುಮ್ನಾಬಾದ್ ಆರ್ಬಿಟ್ ಸಂಸ್ಥೆ ವತಿಯಿಂದ ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಫಾದರ್ ಲಿವಿನ್ ಮಾತಾಡಿದ್ದು,ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಮಾಡಲು ಅನೇಕ ತರಬೇತಿ ನೀಡುತಿದೆ,ಅದರ ಸದುಪಯೋಗ ಮಹಿಳೆಯರು ಪಡೆದುಕೊಂಡು ಸ್ವಾವಲಂಬಿಯಾಗಿ ಬದುಕು ಸಾಗಿಸಿಬೇಕು ಎಂದರು.ಬಳಿಕ ಸಂಸ್ಥೆಯ ವ್ಯವಸ್ಥಾಪಕರಾದ ಸಿಸ್ಟರ್ ಮಿನಿ ಮೆಥೋ,ಪೇಪರ್ ಬ್ಯಾಗ್ ತೈಯಾರಿ ಮಾಡುವ ಮೂಲಕ ಸುತ್ತ ಮುತ್ತಲಿನ ಪರಿಸರ ಸ್ವಚ್ಛವಾಗಿ ಈಡಲು ಸಾಧ್ಯವಾಗುತ್ತದೆ. ಜೋತೆಗೆ ಇದರಿಂದ ಪರಿಸರ ಸಂರಕ್ಷಣೆ ಮಾಡಲಾಗಿ ಪ್ಲಾಸ್ಟಿಕ್ ನಿರ್ಮೂಲನೆ ಮಾಡಲು ಸಹಾಯಕವಾಗಿದೆ ಎಂದು ಹೇಳಿದರು.ಗ್ರಾಮ ಪಂಚಾಯತ್ ಸದಸ್ಯ ಗುಂಡಪ್ಪ ಗೌರ ಕೂಡ ಮಾತನಾಡಿದರು.

ಈ ಸಂದರ್ಭ ದಲ್ಲಿ ಸೇವಾಕಾರ್ಯದರ್ಶಿ ಸಚಿನ್, ಮಂಗಲಗಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಸುಭಾಷ್ ಚೌಹಾನ್, ಕರವಸಲಿಗಾರ ಬಕ್ಕಪ್ಪ,ಆರ್ಬಿಟ್ ಸಂಸ್ಥೆಯ ಸಂಯೋಜಕಿ ಶ್ರೀಮತಿ ನಿರ್ಮಲ, ಕಾರ್ಯಕರ್ತೆ ಶ್ರೀಮತಿ ಸವಿತಾ, ಸಂಪನ್ಮೂಲ ವ್ಯಕ್ತಿ ಶಾದ್ರಕ್ ಸೇರಿ ಅನೇಕ ಮಹಿಳೆಯರು ಭಾಗಿಯಾಗಿದ್ದರು.

## ನಮ್ಮ ಚಿತ್ತ ಮಕ್ಕಳ ನತ್ತ 1098 ಕುರಿತು ಜಾಗೃತಿ

(ರಾಜಕುಮಾರ್ ಆರ್.ಹಡಪದ)

**ಮಲ್ಲಮ್ಮ ನುಡಿ ವಾರ್ತೆ**



ಚಿಟಗುಪ್ಪಾ ತಾಲೂಕಿನ ಮಂಗಲಗಿ ವಾಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಸಹಾಯವಾಣಿ 1098 ಉಪಕೇಂದ್ರ ಆರ್ಬಿಟ್ ಸಂಸ್ಥೆ ಹುಮನಾಬಾದ್ ಇವರ ಸಂಯುಕ್ತಾಶ್ರಯದಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ಮಕ್ಕಳ ಸಹಾಯವಾಣಿ ಕಾರ್ಯಕರ್ತರಾದ ಎಸ್ ಆರ್ ಕಂಠಿ ಮಾತನಾಡಿ ಭಾರತ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಒಂದು ಯೋಜನೆಯಾಗಿದ್ದು ಇದು ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ 0–18 ವರ್ಷದ ಮಕ್ಕಳಿಗಾಗಿ ದಿನದ 24 ಗಂಟೆಗಳ ಉಚಿತ ತುರ್ತು ದೂರವಾಣಿ ಹಾಗೂ ಹೊರ ಸಂಪರ್ಕ ಸೇವೆಯನ್ನು ನೀಡುತ್ತದೆ ಭಾರತದ್ಯಂತ ಮಕ್ಕಳ ಸಹಾಯಕ್ಕಾಗಿ ಏಕೈಕ ಸಹಾಯವಾಣಿ 1098 ಆಗಿರುತ್ತದೆಮಕ್ಕಳ ಸಹಾಯವಾಣಿ ಅಂಚಿನಲ್ಲಿರುವ ಮಕ್ಕಳಿಗೆ ರಕ್ಷಣೆ ಮತ್ತು ಪುನರ್ವಸತಿ ಸೇವೆಯನ್ನು ಒದಗಿಸಿಕೊಡುವಲ್ಲಿ ಕಾರ್ಯಪ್ರವೃತ್ತವಾಗಿದೆ ಬೀದಿಬದಿ ಮಕ್ಕಳು ಬಾಲಕಾರ್ಮಿಕರು ಶಾಲೆ ಅಥವಾ ದೌರ್ಜನ್ಯಕ್ಕೆ ಒಳಗಾದ ಮಕ್ಕಳು ಪೋಷಕರಿಂದ ದೂರವಾದ ಮಕ್ಕಳು ಅಪಘಾತಕ್ಕೆ ತುತ್ತಾದ ಹಾಗೂ ನಾನಾ ಕಾರಣಗಳಿಂದ ಸಂಕಷ್ಟಕ್ಕೆ ಸಿಲುಕಿ ಭಾವನಾತ್ಮಕ ಬೆಂಬಲ ಮತ್ತು ಮಾರ್ಗದರ್ಶನ ಬಯಸುತ್ತಿರುವ ಮಕ್ಕಳಿಗೆ ನೆರವನ್ನು ನೀಡುವ ಕಾರ್ಯವನ್ನು ಮಕ್ಕಳ ಸಹಾಯವಾಣಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರು, ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಚುಟುಕು ಸುದ್ದಿ

### ಆರ್ಬಿಟ್ ಸಂಸ್ಥೆಯಿಂದ ಬಟ್ಟೆ ತಯಾರಿಕಾ ತರಬೇತಿ




**ಹುಮನಾಬಾದ್:** ಇಲ್ಲಿನ ಶಿವಪುರ ಬಡಾವಣೆಯಲ್ಲಿ ಆರ್ಬಿಟ್ ಸಂಸ್ಥೆಯಿಂದ ಬಟ್ಟೆ ತಯಾರಿಕಾ ತರಬೇತಿ ಶಿಬಿರ ಜರುಗಿತು.

ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್ ಅವರು ಬಟ್ಟೆ ತಯಾರಿಕ ತರಬೇತಿ ಶಿಬಿರ ಉದ್ಘಾಟಿಸಿದರು. ಬಳಿಕ ಮಾತನಾಡಿ ಆರ್ಬಿಟ್ ಸೇವಾ ಸಂಸ್ಥೆಯಿಂದ ಸತತ ಎರಡು ತಿಂಗಳವರೆಗೆ ಬಟ್ಟೆ ತಯಾರಿಕ ತರಬೇತಿ ಶಿಬಿರ ನಡೆಸಲಾಗುತ್ತಿದೆ. ಅರ್ಹರು ನಮ್ಮಲ್ಲಿರುವ ಕೌಶಲ್ಯವನ್ನು ಬಳಸಿಕೊಂಡು ತರಬೇತಿಯ ಸದುಪಯೋಗ ಪಡೆದು ಸ್ವಯಂ ಉದ್ಯೋಗ ಸ್ಥಾಪಿಸಿಕೊಂಡು ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಆರ್ಬಿಟ್ ಸಂಸ್ಥೆಯ ಯೋಜನೆಯ ವ್ಯವಸ್ಥಾಪಕಿ ಸಿಸ್ಟರ್. ಮಿನಿ ಮ್ಯಾಥ್ಯೂ ಅವರು ಮಾತನಾಡಿ, ಈ ತರಬೇತಿಯಲ್ಲಿ ನೀವು ದಿನಾಲು ಗೈರುಹಾಜರಾಗದೆ ಸರಿಯಾದ ಸಮಯಕ್ಕೆ ಬಂದು ಕಲಿಯುವಾಗ ನಿಮ್ಮ ಜೀವನಕ್ಕೆ ಉಪಯೋಗವಾಗುವಂತಹ ಅನೇಕ ವಿಷಯಗಳ ಬಗ್ಗೆ ತಿಳಿಸಿ ಕೊಡಲು ಹೆಚ್ಚಿನ ಅನುಕೂಲವಾಗುತ್ತೆದೆ ಎಂದರು.

ಬಟ್ಟೆ ತಯಾರಿಕಾ ತರಬೇತಿಯು ನಿಮ್ಮ ಜೀವನವನ್ನೆ ಬದಲಾಯಿಸಿ ಕೊಳ್ಳುವಂತಹ ಒಳ್ಳೆಯ ಅವಕಾಶ ಇದಾಗಿದೆ. ಈ ರೀತಿಯ ತರಬೇತಿಗಳು ನಡೆಸುವುದರಿಂದ ಗ್ರಾಮೀಣ ವಲಯದಲ್ಲಿರುವ ಅತೀ ಬಡವರಿಗೆ ಹಾಗೂ ಮಹಿಳೆಯರಿಗೆ ಮತ್ತು ಮಕ್ಕಳಿಗೆ ಮುಂದಿನ ಜೀವನಕ್ಕೆ ಸ್ವ-ಉದ್ಯೋಗ ಸೃಷ್ಟಿ ಮಾಡಿಕೊಳ್ಳಲು ಇಂತಹ ತರಬೇತಿಗಳು ಬಹು ಅವಶ್ಯಕ ಎಂದು ತಿಳಿಸಿದರು.

ಅಭಿಷೇಕ, ಶ್ರೀಮತಿ ಮಹಿಮುದಾ ಬಿ, ಕವಿತಾ ಸೇರಿದಂತೆ ಒಟ್ಟು 20 ಫಲಾನುಭವಿಗಳು ಭಾಗವಹಿಸಿದರು. ನಿರ್ಮಲಾ ನಿರೂಪಿಸಿದರು. ಫರೀನ ಬೇಗಂ ಪ್ರಾರ್ಥಿಸಿದರು. ಆಸಮ್ಮಾ ಬೇಗಂ ಸ್ವಾಗತಿಸಿದರು. ರುಬೀನಾ ವಂದಿಸಿದರು.

ಉದಯಕಾಲ


## ಮಕ್ಕಳ ಸಹಾಯವಾಣಿ ಕುರಿತು ಮಾಹಿತಿ

**ಬಸವಕಲ್ಯಾಣ:** ತಾಲೂಕಿನ ಕೌಡಿಯಾಳ (ಎಸ್) ಗ್ರಾಮದಲ್ಲಿ ಭಾರತಿ ವಿದ್ಯಾಮಂದಿರ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ಮತ್ತು ಜಾಗತೀಕ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಸಂದರ್ಬದಲ್ಲಿ , ಆರ್ಬಿಟ್ ಸಂಸ್ತೆ ಉಪಕೇಂದ್ರ, ಹುಮನಾಬಾದ ಮತ್ತು ಮಕ್ಕಳ ಸಹಾಯವಾಣಿ ಕಾರ್ಯಕರ್ತೆ ಮಹಾದೇವಿ ಸೂರ್ಯಂಶಿ ಮಾತನಾಡಿ, ಎಲ್ಲಾದರೂ ಮಕ್ಕಳ ಬಗ್ಗೆ ತೊಂದರೆ ಮತ್ತು ಸಮಸ್ಯೆಗಳು ಕಂಡು ಬಂದರೆ ತಕ್ಷಣ 1098 ಈ ಸಂಖ್ಯೆಗೆ ಕರೆ ಮಾಡಬೇಕು, ಅಲ್ಲದೆ ಬಾಲಕಾರ್ಮಿಕ ಮಕ್ಕಳು ಬೀದಿ ಬೀದಿಯಲ್ಲಿ ಚಿಂದಿ ಆಯುವದು ಬಾಲ್ಯವಿವಾಹಗಳನ್ನು ನಡೆಯುವ ಬಗ್ಗೆ ಅದನ್ನು ಹೇಗೆ ತಡೆಯಬೇಕು ಎಂಬುದರ ಕುರಿತು ಮಾಹಿತಿ ತಿಳಿಸಿದರು. ಈ ಸಂದರ್ಬದಲ್ಲಿ ಶಾಲೆಯ ಮುಖ್ಯಗುರು ಸುನಿತಾ ಸುರೇಶ ದಾಸರೆ, ಶಿಕ್ಷಕಿ ಸರಸ್ವತಿ, ಜ್ಯೋತಿ, ಅಶ್ವಿನಿ ದೇವಿ, ದೀಪಿಕಾ, ಮುಂತಾದವರು ಉಪಸ್ಥಿತರಿದ್ದರು.





# Organization of Bidar Integral Transformation (ORBIT)



# APPEAL

***Remove 'DIS' From DISABLE***

(Only for Indian citizens)
**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

***Sponsor a Child with Rs. 500 per Month /6000 per Year.***

*Our goal is to "Focus on what children can do, their abilities, rather than their disability."*

## ACTION PLANS :

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**

**ADDRESS**
ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT

Note : Please WhatsApp your address to the above given number after sending money.